ಶ್ರೀ ಬಿ. ರಾಚಯ್ಯ.—ಈಗ ಈ ಆಪೋಗ್ಯ ಕೇಂದ್ರಗಳನ್ನು ತೆರೆಯುತ್ತಿದ್ದೇವಲ್ಲ ಅಲ್ಲಿ ಇವರನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಬಿ. ಎಂ.ತಿಪ್ಪೇಸ್ವಾಮಿ.—ಇಂಪಾರ್ಟೆಂಟ್ ಕೊಶ್ಚನ್ ಬಿಟ್ಟು ಹೋಗಿದೆ. " How many undergraduates are working in major hospitals in districts and in teaching hospitals ? '

ಶ್ರೀ ರಾಮಪ್ಪ.—ಈಗ ಎಷ್ಟು ಹುದ್ದೆಗಳು ಖಾಲಿ ಇದೆ. ಇದನ್ನು ನೋಡಿದರೆ ಉದ್ಯೋಗ ಕೊಡುವ ಪರಿಸ್ಥಿತಿ ನಿಮ್ಮಲ್ಲಿದೆಯೇ ? ನಮ್ಮಲ್ಲಿ ಎಂಬಿಬಿಎಸ್ ಓದಿದವರು ಇಲ್ಲ, ಪ್ರೊಫೆಸರ್ಸ್ ಇಲ್ಲ. ಎಷ್ಟು ಹುದ್ದೆಗಳು ಖಾಲಿ ಇದೆ ಹೇಳಿ.

ಶ್ರೀ ಬಿ. ರಾಚಯ್ಯ.—ಅದಕ್ಕೆ ಬೇರೆ ಪ್ರಶ್ನೆ ಕೇಳಿದರೆ ಹೇಳುತ್ತೇನೆ. ವೈದ್ಯಕೀಯದಲ್ಲಾಗಲಿ, ಇಂಜನಿಯರಿಂಗ್‌ನಲ್ಲಾಗಲಿ ಯಾರು ಪದವಿ ಪಡೆದುಕೊಳ್ಳುತ್ತಾರೋ ಅವರಿಗೆ ಸರ್ಕಾರ ಉದ್ಯೋಗ ಕೊಡುತ್ತದೆ ಎಂದು ಭರವಸೆ ಏನಿಲ್ಲ. ಏಕೆಂದರೆ ಅವರು ತಾಂತ್ರಿಕ ಸಿಬ್ಬಂದಿಯಾಗಿರುವುದರಿಂದ ಅವರು ಸ್ವಂತವಾಗಿ ತಮ್ಮ ಕಾರ್ಯದಲ್ಲಿ ನಿರತರಾಗಬಹುದು ಅಥವಾ ಕ್ಲಿನಿಕಲ್ ತೆಗೆಯಬಹುದು. ಅದಕ್ಕೆ ಬ್ಯಾಂಕುಗಳು ಸಾಲ ಕೊಡುತ್ತವೆ. ಆ ದೃಷ್ಟಿಯಲ್ಲಿ ಉದ್ಯೋಗವನ್ನು ಅವಲಂಬಿಸ ಬೇಕಾಗುತ್ತದೆ.

ಶ್ರೀ ಎಂ. ರಾಮಪ್ಪ.—ಮಾನ್ಯ ರಾಚಯ್ಯನವರು ಕಳಕಳಿಯಿಂದ ಪೋಸ್ಟಿಂಗ್ಸ್ ಕೊಡುತ್ತಾರೆ, ಚೀಫ್ ಮಿನಿಸ್ಟರ್ ಅದನ್ನು ಕ್ಯಾನ್ಸಲ್ ಮಾಡುತ್ತಾರೆ. ನಮ್ಮಲ್ಲಿ ೪೦ ಪರ್ಸೆಂಟ್ ಪ್ರೊಫೆಸರ್ಸ್ ಇಲ್ಲ, ಬಳ್ಳಾರಿಗೆ ಒಬ್ಬರೂ ಬರುವುದಿಲ್ಲ. ಈ ಬಗ್ಗೆ ಕಾಲಿಂಗ್ ಅಟೆನ್‌ಷನ್ ಹಾಕಿದರೂ ಉತ್ತರ ಇಲ್ಲ. ಇವರು ಹಾಕುತ್ತೇನೆಂದು ಹೇಳುತ್ತಾರೆ, ಅವರು ಕ್ಯಾನ್ಸಲ್ ಮಾಡುತ್ತಾರೆ. ಕಾಲೇಜಿನಲ್ಲಿ ಯಾರೂ ಇಲ್ಲ.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ.—ಅವರು ದೂರು ಹೇಳುತ್ತಾ ಇಲ್ಲ, ಅನುಕಂಪದಿಂದ ಹೇಳುತ್ತಾ ಇದ್ದಾರೆ.

ಶ್ರೀ ಬಿ. ರಾಚಯ್ಯ.—ಈ ಪ್ರಶ್ನೆ ಇದರಲ್ಲಿ ಬರುವುದಿಲ್ಲ ಆದರೂ ಕೂಡ ಹೇಳುತ್ತಾ ಇದ್ದೇನೆ. ಈ ಸಾರಿ ಬಳ್ಳಾರಿ–ಹುಬ್ಬಳ್ಳಿಯಲ್ಲಿ ಖಾಲಿ ಇರುವ ಕಡೆ ಅವರು ಹೋಗುವ ಹಾಗೆ ಮಾಡುತ್ತೇನೆ ಹೋಗದೇ ಹೋದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.

ಕುಂದಾಪುರದಲ್ಲಿ ರಸ್ತೆ ಸಾರಿಗೆ ಡಿಪೋ

೨೨೯೧. ಶ್ರೀ ಜಿ. ಎಸ್ ಆಚಾರ್(ಬೈಂದೂರ್).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಡಿಪೋ ರಚಿಸಿ ಅನೇಕ ತಿಂಗಳು ಕಳೆದಿದ್ದರೂ ಅದರ ಕಾರ್ಯರಂಭವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ;

ಆ) ಹಾಲಿನಿಗಮದ ಬಸ್ಸುಗಳು ರಸ್ತೆ ಬದಿಯಲ್ಲಿ ಮರಗಳ ಅಡಿಯಲ್ಲಿ ನಿಲ್ಲಿಸುತ್ತಿರುವುದರಿಂದ ಬಸ್ಸುಗಳಿಗಾಗುವ ತೊಂದರೆ. ಬಸ್ಸುಗಳು ದಿನವಿಡೀ ರಸ್ತೆ ಬದಿ ನಿಂತಿದ್ದರಿಂದ ಸಾರ್ವಜನಿಕರಿಗಾಗುವ ತೊಂದರೆ ಸರ್ಕಾರದ ಗಮನಕ್ಕೆ ಬಂದಿದೆಯೇ ;

ಇ) ಹಾಗಿದ್ದಲ್ಲಿ ಈ ತೊಂದರೆಗಳನ್ನು ನಿವಾರಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು ;

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಮಂತ್ರಿಗಳು).—

ಅ) ಕುಂದಾಪುರದಲ್ಲಿ ಬಸ್ ಡಿಪೋವಿನ ಕಾರ್ಯಾರಂಭವಾಗಿದೆ.

ಆ) ಮತ್ತು ಇ) ಉದ್ಭವಿಸುವುದಿಲ್ಲ.

ಶ್ರೀ ಜಿ. ಎಸ್. ಆಚಾರ್.—ಮಾನ್ಯ ಅಧ್ಯಕ್ಷರೆ, ಈ ಬಸ್ ಡಿಪೊ ಕಾರ್ಯಾರಂಭವಾಗಿದೆ, ಅಲ್ಲಿ ಒಂದು ಬಸ್ ಸ್ಟ್ಯಾಂಡಿನ ಅವಶ್ಯಕತೆ ಇದೆ. ಅದನ್ನು ಮಾಡಲಿಕ್ಕೆ ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ ? ಬಸ್ ಡಿಪೊ ಉದ್ಘಾಟನಾ ಸಮಾರಂಭದ ದಿವಸ ಎಲ್ಲರ ಬೇಡಿಕೆಗ ಅನುಗುಣವಾಗಿ ಮಾನ್ಯ ಮಂತ್ರಿಗಳು ಅನೇಕ ಆಶ್ವಾಸನೆಗಳನ್ನು ಕೊಟ್ಟಿದ್ದಾರೆ. ಕುಂದಾಪುರದಿಂದ ಬೆಂಗಳೂರಿಗೆ ಹೋಗುವಂಥ ಬ್ಸಿನ ವೇಳೆಯನ್ನು ಸ್ವಲ್ಪ ವಿಳಂಬ ಮಾಡುವ ಬಗ್ಗೆ ಮತ್ತು ಹೊಸ ಹೊಸ ಕೆಲವು ಬಸ್‌ಗಳ ರೂಟನ್ನು ಪ್ರಾರಂಭ ಮಾಡುತ್ತೇವೆಂದು ಆಶ್ವಾಸನೆ ಕೊಟ್ಟಿದರು. ಅದರ ಪ್ರಕಾರ ಕಾರ್ಯಾಚರಣೆ ಆಗುತ್ತಾ ಇದೆಯೇ ? ಆ ಸಮಾರಂಭದಲ್ಲಿ ಸ್ಥಳೀಯ ಪುರಸಭಾಧ್ಯಕ್ಷರನ್ನು ಅವಹೇಳನಗೊಳಿಸಲಾಯಿತು ಎಂಬ ದೂರು ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಿದೆಯೇ ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೆ, ಕುಂದಾಪುರದಲ್ಲಿ ಬಸ್ ನಿಲ್ದಾಣ ಕಟ್ಟಬೇಕು ಎನ್ನುವ ವಿಚಾರ ಸಾರಿಗೆ ಸಂಸ್ಥೆ ಮುಂದೆ ಇದೆ. ಅದಕ್ಕೆ ಬೇಕಾಗಿರತಕ್ಕಂಥ ಸ್ಥಳ ಇನ್ನೂ ಸಿಗದೇ ಇರುವುದರಿಂದ ತಡವಾಗಬಹುದು. ಮತ್ತೆ ನಾನು ಅವತ್ತಿನ ಸಮಾರಂಭದಲ್ಲಿ ಹೊಸದಾಗಿ ಕೆಲವು ಬಸ್‌ಗಳ ರೂಟನ್ನು ಪ್ರಾರಂಭ ಮಾಡುವುದರ ಬಗ್ಗೆ ಮತ್ತು ಇನ್ನಿತರ ವಿಚಾರಗಳ ಬಗ್ಗೆ ಏನು ಪ್ರಸ್ತಾಪ ಮಾಡಿ ತಿಳಿಸಿದ್ದೇನೆ ಅವೆಲ್ಲವೂ ಸಹಿತ ಆದಷ್ಟು ಬೇಗ ಕಾರ್ಯಾಚರಣೆಯಾಗುತ್ತವೆ. ಆ ಸಮಾರಂಭದಲ್ಲಿ ಪುರಸಭಾಧ್ಯಕ್ಷರನ್ನು ಕರೆದಿರಲಿಲ್ಲ ಎನ್ನುವ ಮಾತೂ ಸಹಿತ ನನಗೆ ತಿಳಿದು ಬಂದಿದೆ. ಈಗಾಗಲೇ ಸಂಬಂಧಪಟ್ಟ ಅಧಿಕಾರಿಗಳಿಗೆ ಸಾರಿಗೆ ಸಂಸ್ಥೆಯ ಯಾವುದೇ ಕಾರ್ಯಕ್ರಮಗಳು ಆದಾಗ, ಅಂತಹ ಸಂದರ್ಭದಲ್ಲಿ ಸ್ಥಳೀಯ ಪುರಸಭಾಧ್ಯಕ್ಷರನ್ನು ಕರೆಯಲಿಕ್ಕೆ ಸೂಚ್ನೋಲೆಯನ್ನೂ ಸಹ ಕಳಿಸಿದ್ದೇನೆ.

೨೭೦೭ ಮಾನ್ಯ ಸದಸ್ಯರು ಗೈರುಹಾಜರು.

ಸ್ನಾತಕೋತ್ತರ ಪ್ರವೇಶ ದೊರಕಿಸಿ ಕೊಡುವುದರ ಬಗ್ಗೆ

೨೦೮೭. ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ (ಗುರುಮಿಟ್‌ಕಲ್).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಸ್ನಾತಕೋತ್ತರ ಪ್ರವೇಶ ದೊರಕಿಸಿ ಕೊಡುವುದಾಗಿ ಭರವಸೆ ನೀಡಿ ಅವ್ಯವಹಾರ ನಡೆಸಿದ್ದಾರೆಂಬ ಆಪಾದನೆ ಬಗ್ಗೆ ಸರ್ಕಾರವು ರಚಿಸಿದ್ದ ಏಕ ಸದಸ್ಯ ಆಯೋಗದ ಜಸ್ಟೀಸ್ ಪುಟ್ಟಸ್ವಾಮಿಯವರು ರಾಜೀನಾಮೆ ನೀಡಲು ಕಾರಣಗಳೇನು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು).—

(ಅ) ವಿವಾದಾತ್ಮಕ ಸಂಪಾದಕೀಯವೊಂದು ಪತ್ರಿಕೆಯಲ್ಲಿ ಪ್ರಕಟವಾದ ನಂತರ ಅವರ ನಿಶ್ಪಕ್ಷಪಾತವಾದ ನಿಲುವನ್ನು ಪ್ರಶ್ನಿಸಿ ನೀಡಿದ ಕೆಲವು ಹೇಳಿಕೆ ಪ್ರಯುಕ್ತ ಜಸ್ಟೀಸ್ ಪುಟ್ಟಸ್ವಾಮಿಯವರು ರಾಜಿನಾಮೆ ನೀಡಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆ ಮಾನ್ಯ ಮುಖ್ಯಮಂತ್ರಿಗಳಿಗೆ ಸೇರುತ್ತದೆ. ತಿಯೋಗವನ್ನು ನೇಮಕ ಮಾಡುವಂಥಾದ್ದು, ಮುಖ್ಯಮಂತ್ರಿಗಳ ಖಾತೆಗೆ ಬರುತ್ತದೆ. The reasons given by Justice Puttaswamy for his resignation from the One Man Commission constituted by Government to probe into Medical M. D. Seat scandal. ಇದು ಹೆಲ್ತ್ ಡಿಪಾರ್ಟಮೆಂಟಿಗೆ ಬರುವುದಿಲ್ಲ.

ಶ್ರೀ ಬಿ. ರಾಚಯ್ಯ.—ಸ್ವಾಮಿ, ಈ ವಿಷಯ ನನ್ನ ಇಲಾಖೆಗೆ ಸಂಬಂಧಪಟ್ಟಿದ್ದು.